## ಕರ್ನಾಟಕ ಸರ್ಕಾರ

ಸಂಖ್ಯೆ: ಅಪಜೀ 186 ಇಎನ್‌ವಿ 2023 ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 25 .10.2023.

### ಜೈವಿಕ ವೈವಿಧ್ಯ ಅಧಿನಿಯಮ, 2002ರ 49 (1)ನೇ ಪ್ರಕರಣದನ್ವಯ ನಿರ್ದೇಶನ

ಜೈವಿಕ ವೈವಿಧ್ಯ ಅಧಿನಿಯಮ, 2002 ಮತ್ತು ಕರ್ನಾಟಕ ಜೈವಿಕ ವೈವಿಧ್ಯ ನಿಯಮಗಳು, 2005 ರ ನಿಬಂಧನೆಗಳನ್ನು ಅನುಸರಣೆ ಮಾಡಲು ಹಾಗೂ ಸದರಿ ಕಾಯಿದೆಯ ಉದ್ದೇಶಗಳಾದ ಜೈವಿಕ ವೈವಿಧ್ಯತೆಯ ಸಂರಕ್ಷಣೆ, ಅದರ ಘಟಕಗಳ ಸುಸ್ಥಿರ ಬಳಕೆ ಮತ್ತು ವಾಣಿಜ್ಯ ಬಳಕೆಯಿಂದ ಉಂಟಾಗುವ ಪ್ರಯೋಜನಗಳ ಲಾಭ ಮತ್ತು ನ್ಯಾಯಸಮ್ಮತ ಹಂಚಿಕೆಗಳು ಸೇರಿದಂತೆ ಹಾಗೂ ಅದರ ನಿಬಂಧನೆಗಳನ್ನು ಇನ್ನೂ ಹೆಚ್ಚಿನ ರೀತಿಯಲ್ಲಿ ಅನುಷ್ಠಾನಗೊಳಿಸುವ ಉದ್ದೇಶದಿಂದ ಹಾಗೂ ಸಾರ್ವಜನಿಕ ಹಿತದೃಷ್ಟಿಯಿಂದ ಸರ್ಕಾರದ ನಿರ್ದೇಶನ ಸಂಖ್ಯೆ: ಅಪಜೀ 154 ಇಎನ್‌ವಿ 2018, ದಿನಾಂಕ: 15.09.2020 ರಲ್ಲಿ ರಾಜ್ಯ ಸರ್ಕಾರವು ಈ ಅಧಿನಿಯಮದ ಸೆಕ್ಷನ್ 49 ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಕೆಳಕಂಡ ನಿರ್ದೇಶನಗಳನ್ನು ನೀಡಿರುತ್ತದೆ.

1. ಜೈವಿಕ ವೈವಿಧ್ಯ ಅಧಿನಿಯಮ, 2002 ರ ಸೆಕ್ಷನ್ 7 ರಡಿಯ ವ್ಯಾಪ್ತಿಯಲ್ಲಿ ಬರುವ, ಜೈವಿಕ ವೈವಿಧ್ಯ ಕಾಯ್ದೆಯ ನಿಬಂಧನೆಗಳು ಮತ್ತು ನಿಯಮಗಳನ್ನು ಪಾಲಿಸಲು ಅಪೇಕ್ಷಿತರಾಗಿರುವ ಭಾರತದ ಎಲ್ಲಾ ನಾಗರೀಕರಿಗೂ/ ಸಂಸ್ಥೆಗಳಿಗೂ ಕರ್ನಾಟಕ ಜೀವ ವೈವಿಧ್ಯ ಮಂಡಳಿಗೆ ಅರ್ಜಿ ನಮೂನೆ-1 ರಲ್ಲಿ ಪೂರ್ವ ಮಾಹಿತಿಯನ್ನು ಈ ನಿರ್ದೇಶನ ಹೊರಡಿಸಿದ 60 ದಿನಗಳೊಳಗಾಗಿ ಸಲ್ಲಿಸತಕ್ಕದ್ದು.
2. ಜೈವಿಕ ಸಂಪನ್ಮೂಲಗಳ ಬಳಕೆ, ಸಂಬಂಧಿತ ಜ್ಞಾನ ಮತ್ತು ಬಳಕೆ ಹಾಗೂ ಲಾಭ ಹಂಚಿಕೆಯು 2014 ರಿಂದ ಜಾರಿಗೆ ಬಂದಿದ್ದು, ಜೈವಿಕ ಸಂಪನ್ಮೂಲಗಳನ್ನು ಪಡೆದುಕೊಳ್ಳುವ ಕುರಿತಂತೆ ನಿರ್ದೇಶನಗಳನ್ನು ಪರಿಗಣನೆಗೆ ತೆಗೆದುಕೊಂಡು ಕಾಯ್ದೆಯ ಅಂಶಗಳ ಅನುಪಾಲನೆಗೆ ಅವಕಾಶವನ್ನು ದಿನಾಂಕ: 15.09.2020 ರಿಂದ ದಿನಾಂಕ: 15.10.2020 ರವರೆಗೆ ನೀಡಲಾಗಿದೆ. ಯಾವ ಚಟುವಟಿಕೆಗಳು ಈ ಹಿಂದೆ ಅನುಮೋದನೆಯನ್ನು ಪಡೆಯಬೇಕಾಗಿತ್ತೋ ಅಂತಹ ಚಟುವಟಿಕೆಗಳಿಗೆ ಮಾತ್ರ ಕೆಲವೊಂದು ಷರತ್ತಿಗೊಳಪಟ್ಟು ಈ ಅವಕಾಶವನ್ನು ನೀಡಿದೆ.
3. ಜೈವಿಕ ಸಂಪನ್ಮೂಲಗಳನ್ನು ಪಡೆದುಕೊಳ್ಳುವ ಅರ್ಜಿ ನಮೂನೆ-I ನ್ನು ಘಟನೋತ್ತರ ಅನುಮೋದನೆಗಾಗಿ (ex post facto) ಸಲ್ಲಿಸುವ ಎಲ್ಲಾ ಅರ್ಜಿಗಳನ್ನು ಮಂಡಳಿಯು ವಿಚಾರಣೆ ಮೂಲಕ ಪರಿಶೀಲಿಸುವುದು ಹಾಗೂ ಸೂಕ್ತವಾದ ಮತ್ತು ಸಮಂಜಸವಾದ ಸಮರ್ಥನೆಗಳನ್ನು ಮತ್ತು ಕಾರಣಗಳನ್ನು ದಾಖಲಿಸಿದ್ದಲ್ಲಿ, ಇಂತಹ ಅರ್ಜಿಗಳು ಮಂಡಳಿಗೆ ಒಪ್ಪಿಗೆಯಾದಲ್ಲಿ ಮಾತ್ರ ಅನುಮೋದನೆ ನೀಡಬಹುದು. ಇಂತಹ ಎಲ್ಲಾ ಘಟನೋತ್ತರ ಅನುಮೋದನೆಗಳ ಪ್ರಕರಣಗಳನ್ನು ಅರ್ಹತೆಯ ಆಧಾರದ ಮೇಲೆ ಪರಿಗಣಿಸತಕ್ಕದ್ದು ಹಾಗೂ ಯಾವ ವ್ಯಕ್ತಿ/ ಘಟಕವು ಸಾಮಾನ್ಯವಾಗಿ ಪೂರ್ವಾನುಮತಿಗಾಗಿ ನಿಗಧಿತ ಸಮಯದಲ್ಲಿ ಅರ್ಜಿ ಸಲ್ಲಿಸಿದಾಗ ಪೂರ್ವಾನುಮತಿ ನೀಡಬಹುದಾದಂತಹ ಪ್ರಕರಣಗಳಲ್ಲಿ ಮಾತ್ರ ಭವಿಷ್ಯದ ಚಟುವಟಿಕೆಗಳಿಗಾಗಿ ಅನುಮತಿ ನೀಡುವುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.

4. ನ್ಯಾಯಸಮ್ಮತವಾದ ವಿಚಾರಣೆ ಮತ್ತು ಮಂಡಳಿಯಿಂದ ತರ್ಕಬದ್ಧವಾದ ನಿರ್ಧಾರವನ್ನು ಕಟ್ಟುನಿಟ್ಟಾಗಿ ಅನುಸರಿಸುವುದು ಸೇರಿದಂತೆ ಸ್ವಾಭಾವಿಕ ನ್ಯಾಯ ತತ್ವಗಳನ್ನು ಪಾಲಿಸುವುದನ್ನು ಮಂಡಳಿಯು ಖಚಿತಪಡಿಸಿಕೊಳ್ಳತಕ್ಕದ್ದು.

ತತ್ಸಂಬಂಧ ಹಿಂದಿನ ಪ್ರಕರಣಗಳ ಬಗ್ಗೆ ತೆಗೆದುಕೊಳ್ಳಬೇಕಾದ ಕ್ರಮಗಳು ಸೇರಿದಂತೆ ಮಂಡಳಿಯು ದಿನಾಂಕ: 15.09.2020 ರಂದು ಹೊರಡಿಸಿದ ನಿರ್ದೇಶನದ ದಿನಾಂಕದಿಂದ 60 ದಿನಗಳೊಳಗಾಗಿ ಸೂಕ್ತ ನಿರ್ಧಾರಗಳನ್ನು ಮತ್ತು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುವಂತೆ ಸೂಚಿಸಲಾಗಿರುತ್ತದೆ.

ಪ್ರಸ್ತುತ, ಕರ್ನಾಟಕ ರಾಜ್ಯ ಜೀವ ವೈವಿಧ್ಯ ಮಂಡಳಿಯು ದಿನಾಂಕ 15.09.2020ರ ನೀಡಿರುವ ನಿರ್ದೇಶನಗಳ ಪ್ರಕಾರ ರಾಜ್ಯದಲ್ಲಿರುವ ಸಂಬಂಧಪಟ್ಟ ಎಲ್ಲಾ ಘಟಕಗಳು ಕಾಯಿದೆಗಳಿಗೆ ಅನುಗುಣವಾಗಿ ಅನುಸರಣೆ ಮಾಡಲು ಈಗಾಗಲೇ 60 ದಿನಗಳ ಅವಕಾಶ ನೀಡಿದ್ದರೂ ಕೋವಿಡ್-19 ಪೆಂಡಮಿಕ್ ನಿಂದ ಮತ್ತು ಸೀಮಿತ ಪ್ರಚಾರದಿಂದ, ನಿಬಂಧನೆಗಳನ್ನು ಪಾಲನೆ ಮಾಡಲು ಅವಕಾಶವಾಗಿರುವುದಿಲ್ಲ. ಈ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಕಾಯ್ದೆಯ ನಿಬಂಧನೆಗಳನ್ನು ಇನ್ನೂ ಹೆಚ್ಚು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಸದರಿ ಕಾಯ್ದೆಯ ಕುರಿತು ಜಾಗೃತಿ ಮೂಡಿಸುವ ಅವಶ್ಯಕತೆ ಇರುವುದರಿಂದ ಮತ್ತೊಮ್ಮೆ 60 ದಿನಗಳ ಕಾಲಾವಕಾಶ ನೀಡಬೇಕೆಂದು ಕೋರಿರುತ್ತಾರೆ.

ಈ ಹಿನ್ನೆಲೆಯಲ್ಲಿ ,ಜೈವಿಕ ವೈವಿಧ್ಯ ಅಧಿನಿಯಮ, 2002 ರ ಸೆಕ್ಷನ್ 7 ರಡಿಯ ವ್ಯಾಪ್ತಿಯಲ್ಲಿ ಬರುವ ಹಾಗೂ ಕಾಯ್ದೆಯ ನಿಬಂಧನೆಗಳು ಮತ್ತು ನಿಯಮಗಳನ್ನು ಪಾಲಿಸಲು ಇಚ್ಛಿಸುವ ಭಾರತದ ಎಲ್ಲಾ ನಾಗರೀಕರಿಗೂ/ ಸಂಸ್ಥೆಗಳಿಗೂ ಕರ್ನಾಟಕ ಜೀವವೈವಿಧ್ಯ ಮಂಡಳಿಗೆ ಅರ್ಜಿ ನಮೂನೆ-1 ರಲ್ಲಿ ಯಾವ ಚಟುವಟಿಕೆಗಳು ಈ ಹಿಂದೆ ಅನುಮೋದನೆಯನ್ನು ಪಡೆಯಬೇಕಾಗಿತ್ತೋ ಅಂತಹ ಚಟುವಟಿಕೆಗಳಿಗೆ ಮಾತ್ರ ಘಟನೋತ್ತರ ಅನುಮೋದನೆಗಾಗಿ ಈ ನಿರ್ದೇಶನವನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಿದ 60 ದಿನಗಳೊಳಗಾಗಿ ಸಂಬಂಧಪಟ್ಟ ಎಬಿಎಸ್ ಮೊತ್ತದೊಂದಿಗೆ ಕರ್ನಾಟಕ ಜೀವವೈವಿಧ್ಯ ಮಂಡಳಿಗೆ ಸಲ್ಲಿಸಲು ಅವಕಾಶ ನೀಡಲಾಗಿದೆ.

ಮುಂದುವರೆದು, ಕರ್ನಾಟಕ ಜೀವವೈವಿಧ್ಯ ಮಂಡಳಿಯು ಜೈವಿಕ ಸಂಪನ್ಮೂಲಗಳನ್ನು ಪಡೆದುಕೊಳ್ಳುವ ಅರ್ಜಿ ನಮೂನೆ-I ನ್ನು ಘಟನೋತ್ತರ ಅನುಮೋದನೆಗಾಗಿ (ex post facto) ಸಲ್ಲಿಸುವ ಎಲ್ಲಾ ಅರ್ಜಿಗಳನ್ನು ವಿಚಾರಣೆ ಮೂಲಕ ಪರಿಶೀಲಿಸುವುದು ಹಾಗೂ ಸೂಕ್ತವಾದ ಮತ್ತು ಸಮಂಜಸವಾದ ಸಮರ್ಥನೆಗಳನ್ನು ಮತ್ತು ಕಾರಣಗಳನ್ನು ದಾಖಲಿಸಿದ್ದಲ್ಲಿ, ಇಂತಹ ಅರ್ಜಿಗಳು ಮಂಡಳಿಗೆ ಒಪ್ಪಿಗೆಯಾದಲ್ಲಿ ಮಾತ್ರ ಅನುಮೋದನೆ ನೀಡಬಹುದು. ಇಂತಹ ಎಲ್ಲಾ ಘಟನೋತ್ತರ ಅನುಮೋದನೆಗಳ ಪ್ರಕರಣಗಳನ್ನು ಅರ್ಹತೆಯ ಆಧಾರದ ಮೇಲೆ ಪರಿಗಣಿಸತಕ್ಕದ್ದು ಹಾಗೂ ಯಾವ ವ್ಯಕ್ತಿ/ ಘಟಕವು ಸಾಮಾನ್ಯವಾಗಿ ಪೂರ್ವಾನುಮತಿಗಾಗಿ ನಿಗಧಿತ ಸಮಯದಲ್ಲಿ ಅರ್ಜಿ ಸಲ್ಲಿಸಿದಾಗ ಪೂರ್ವಾನುಮತಿ ನೀಡಬಹುದಾದಂತಹ ಪ್ರಕರಣಗಳಲ್ಲಿ ಮಾತ್ರ ಭವಿಷ್ಯದ ಚಟುವಟಿಕೆಗಳಿಗಾಗಿ ಅನುಮತಿ ನೀಡುವುದನ್ನು ಖಚಿತಪಡಿಸಿಕೊಳ್ಳತ್ತಕ್ಕದ್ದು. ಹಾಗೂ ಹಿಂದಿನ ಪ್ರಕರಣಗಳ ಬಗ್ಗೆ ತೆಗೆದುಕೊಳ್ಳಬೇಕಾದ ಕ್ರಮಗಳು ಸೇರಿದಂತೆ ಮಂಡಳಿಯು ಈ ನಿರ್ದೇಶನ ಹೊರಡಿಸಿದ 60 ದಿನಗಳೊಳಗಾಗಿ ಸೂಕ್ತ ನಿರ್ಧಾರಗಳನ್ನು ಮತ್ತು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು.

ಸಕ್ಷಮ ಪ್ರಾಧಿಕಾರದ ಅನುಮೋದನೆಯೊಂದಿಗೆ ಈ ನಿರ್ದೇಶನಗಳನ್ನು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಬಿ ಎನ್.ಪ್ರವೀಣ್)**
ಸರ್ಕಾರದ ಅಧೀನ ಕಾರ್ಯದರ್ಶಿ,
(ಜೀವಿಪರಿಸ್ಥಿತಿ ಮತ್ತು ಪರಿಸರ),
ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ.

ರವರಿಗೆ:
1. ಸದಸ್ಯ ಕಾರ್ಯದರ್ಶಿಗಳು, ಕರ್ನಾಟಕ ಜೀವವೈವಿಧ್ಯ ಮಂಡಳಿ, ವನವಿಕಾಸ ಕಟ್ಟಡ, ೧೮ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು.
2. ಮಾನ್ಯ ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು ಇವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
3. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಇವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಅರಣ್ಯ, ಪರಿಸರ ಮತು ೆತಜೀವಿಶಾಸ್ತ್ರ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
5. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, (ಜೀವಿಪರಿಸ್ಥಿತಿ ಮತ್ತು ಪರಿಸರ), ಅರಣ್ಯ, ಪರಿಸರ ಮತ್ತು ಜೀವಿಪರಿಸ್ಥಿತಿ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
6. ಇ-ಗೆಜೆಟ್ ಪ್ರಕಟಣೆಗಾಗಿ.
7. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.